# ಹಬ್ಬದ ಸಂಭ್ರಮಕ್ಕೆ ಟ್ರೆಂಡಿ–ಫ್ಯೂಷನ್ ಉಡುಗೆ




**ಇದೀಗ ಹಬ್ಬದ ಸಂಭ್ರಮ. ಫ್ಯಾಷನೆಬಲ್ ಉಡುಗೆ ತೊಟ್ಟು ಸಡಗರದಿಂದ ಹಬ್ಬ ಆಚರಿಸುವ ಸಮಯ. ನವರಾತ್ರಿ ಮುಗಿಯುತ್ತಿದ್ದಂತೆ ದೀಪಾವಳಿ ಹಬ್ಬ ಬರಮಾಡಿಕೊಳ್ಳುವ ಕಾಲ ಇದೀಗ ಸನ್ನಿಹಿತ. ಹಬ್ಬಕ್ಕೆ ಟ್ರೆಡಿಷನಲ್, ಟ್ರೆಂಡಿ, ಫ್ಯಾಷನ್–ಫ್ಯೂಷನ್ ಉಡುಗೆ ಧರಿಸಿದರೆ ಸಂಭ್ರಮ ಮತ್ತಷ್ಟು ಕಳೆಕಟ್ಟುತ್ತದೆ.**

**■ ಉಮಾ ಅನಂತ್**

ನವರಾತ್ರಿ ಹಬ್ಬ ಮುಗಿಯುತ್ತಿದ್ದಂತೆ ಮತ್ತೊಂದು ದೊಡ್ಡ ಹಬ್ಬದ ಸಂಭ್ರಮ ಸನಿಹದಲ್ಲೇ ಇದೆ. ಬೆಳಕಿನ ಹಬ್ಬವನ್ನು ಸಡಗರದಿಂದ ಬರಮಾಡಿಕೊಳ್ಳಲು ಫ್ಯಾಷನ್ ಲೋಕ ಕೂಡ ತುದಿಗಾಲಿನಲ್ಲಿ ನಿಂತಿದೆ. ಬರೀ ಸೀರೆ, ಒಡವೆಗಳಲ್ಲದೆ ಇದೀಗ ಆ್ಯಸೆಸ್ಸರೀಸ್ ಕೂಡ ಫ್ಯಾಷನ್‌ನೊಂದಿಗೆ ಅಷ್ಟೇ ಮಹತ್ವದ್ದಾಗಿ ತಳುಕು ಹಾಕಿಕೊಂಡಿದೆ.

ಎಲ್ಲದಕ್ಕೂ ಮುಕುಟವಾಗಿ ನಿಲ್ಲುವುದು ಮಹಿಳೆಯರ ಮಟ್ಟಿಗೆ ವೈವಿಧ್ಯಮಯ ಉಡುಗೆಗಳು. ಅದು ಸೀರೆಯೇ ಆಗಿರಬೇಕಿಲ್ಲ. ಸಾಂಪ್ರದಾಯಿಕ–ಆಧುನಿಕ ಎರಡೂ ಲುಕ್ ನೀಡುವ ತರಹೇವಾರಿ ಸಲ್ವಾರ್‌ಗಳು, ಕುರ್ತಿಗಳು ಇಂದು ಫ್ಯಾಷನ್ ಜಗತ್ತಿನಲ್ಲಿ ಪೈಪೋಟಿ ನಡೆಸುತ್ತಿವೆ.

ಹಬ್ಬದ ಸಂದರ್ಭದಲ್ಲಿ ವಿಶೇಷವಾಗಿ ಆಧುನಿಕ ಲುಕ್ ನೀಡುವ ಸಾಂಪ್ರದಾಯಿಕ ಉಡುಗೆಗಳಿಗೇ ಹೆಚ್ಚಿನ ಪ್ರಾಶಸ್ತ್ಯ. ಇಂದಿನ ಫ್ಯಾಷನ್ ಟ್ರೆಂಡ್‌ಗೆ ತಕ್ಕ ಹಾಗೆ ಉಡುಪುಗಳೂ ವೈವಿಧ್ಯಮಯ ವಿನ್ಯಾಸಗಳಲ್ಲಿ ಸಿಗುತ್ತವೆ. ಅದು ಎಥ್ನಿಕ್ ಉಡುಗೆಯೇ ಆಗಿರಲಿ, ಅನಾದಿ ಕಾಲದಿಂದಲೂ ಫ್ಯಾಷನ್ ಟ್ರೆಂಡ್ ಆಗಿಯೇ ಉಳಿಯುತ್ತಾ ಬಂದ ಸಾಂಪ್ರದಾಯಿಕ ಸೀರೆಯೇ ಆಗಿರಲಿ, ರೇಷ್ಮೆಯ ಜರಿ ಲಂಗ, ಗಾಗ್ರಾ ಚೋಲಿಯೇ ಆಗಿರಲಿ.. ಇವೇ ಉಡುಪುಗಳಿಗೆ ಒಂದಿಷ್ಟು ಫ್ಯಾಷನ್ ಟಚ್ ಕೊಟ್ಟು ಉಡುಪು ವಿನ್ಯಾಸಗಾರರು ಮತ್ತಷ್ಟು ಫ್ಯಾಷನೆಬಲ್ ಆಗಿ ಕಾಣುವಂತೆ ಮಾಡುತ್ತಾರೆ. ಇವೆಲ್ಲ ಉಡುಪುಗಳು ಹಬ್ಬದ ಸಂದರ್ಭದಲ್ಲಿ ಮಹಿಳೆಯರಿಗೆ ಶೋಭೆ ನೀಡುತ್ತವೆ.

ಹಬ್ಬದ ಸಂದರ್ಭದಲ್ಲಿ ಎಲ್ಲ ಮಹಿಳೆಯರೂ ಹೊಸ ವಿನ್ಯಾಸ ದ ಉಡುಗೆಯನ್ನೇ ತೊಡಲು ಇಷ್ಟಪಡುತ್ತಾರೆ. ಎಲ್ಲ ಬಗೆಯ ಟ್ರೆಡಿಷನಲ್, ಟ್ರೆಂಡಿ ಹಾಗೂ ಫ್ಯೂಷನ್ ಲುಕ್ ಕೊಡುವ ಉಡುಗೆಯನ್ನು ತೊಡಬೇಕೆಂಬುದು ಆಧುನಿಕ ಮನೋಭಾವದ ಮಹಿಳೆಯರ ಅಭಿಲಾಷೆ' ಎನ್ನುತ್ತಾರೆ ಕಿರುತೆರೆ ನಟಿ ವೈಷ್ಣವಿ ಗೌಡ.

'ಹಬ್ಬದ ಸಂದರ್ಭದಲ್ಲಿ ಸಾಮಾನ್ಯವಾಗಿ ಕಡುಬಣ್ಣದ ಉಡುಗೆಯೇ ಹೆಚ್ಚಿನ ಲುಕ್ ಕೊಡುವುದು. ಅದರಲ್ಲೂ ಗೋಲ್ಡ್ ಪ್ರಿಂಟ್ ಮೇಲೆ ಬ್ರೈಟ್ ಕಲರ್ ಉಡುಪು ಟ್ರೆಡಿಷನ್ ಅನ್ನು ಇಂದಿನ ಟ್ರೆಂಡ್ ಜತೆಗೆ ಬ್ಲೆಂಡ್ ಮಾಡಿ ಹೊಸ ವಿನ್ಯಾಸದಂತೆಯೇ ಕಂಗೊಳಿಸುತ್ತದೆ. ಸಾಮಾನ್ಯವಾಗಿ ದುರ್ಗಾ ಪೂಜೆ, ಲಕ್ಷ್ಮಿ ಪೂಜೆ ಸಂದರ್ಭಗಳಲ್ಲಿ ಸಾಂಪ್ರದಾಯಿಕ ಉಡುಗೆಯೇ ಒಳ್ಳೆಯದು' ಎಂಬ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ ಕಿರುತೆರೆ ನಟಿ ಶ್ವೇತಾ ಆರ್. ಪ್ರಸಾದ್.

'ಮೊದಲೆಲ್ಲಾ ಸಲ್ವಾರ್‌ನಲ್ಲೇ ಹಲವು ಬಣ್ಣ, ವಿನ್ಯಾಸ, ಆಕಾರದ ಸೀಮಿತ ವೈವಿಧ್ಯಗಳ ಉಡುಪುಗಳಿದ್ದವು. ಆದರೆ ಈಗ ಫ್ಯಾಷನ್ ಜಗತ್ತು ಸಾಕಷ್ಟು ವಿಸ್ತಾರವಾಗಿದೆ. ಹೊಸ ಹೊಳಹುಗಳನ್ನು

